**ಕ್ರಿಮಿನಲ್ ಮಿಸ್**. ನಂ.:24/2025

ಪಿ.ಡಬ್ಲ್ಯೂ: 01

(ಇಂದು ದಿನಾಂಕಃ 28-**11-2025** ರಂದು ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣ ವಚನ ಬೋಧಿಸಲಾಯಿತು.)

**<u>ಪಾಟೀ ಸವಾಲು – ಎದುರುದಾರ ಪರ ಶ್ರೀ. ಜಿ.ಜಿ.ಜಿ. ವಕೀಲರಿಂದ</u>**

ನನಗೆ ಶಾಹಿಸ್ತಾ ಸಮರಿನ್ ಎಂಬ ಒಬ್ಬಳೇ ಮಗಳು ಇರುತ್ತಾರೆ. ಅವರು 10ನೇ ತರಗತಿಯವರೆಗೆ ಕಲಿತಿರುತ್ತಾರೆ. ಅವಳಿಗೆ 19ನೇ ವರ್ಷದಲ್ಲಿ ಮದುವೆ ಮಾಡಿರುತ್ತೇನೆ. ಎದುರುದಾರರು ಆ ಸಂದರ್ಭದಲ್ಲಿ ಊರಿನಲ್ಲಿ ಕೆಲಸದಲ್ಲಿ ಇದ್ದರು. ಮದುವೆ ಆದ ನಂತರ ನನ್ನ ಮಗಳು ನಮ್ಮ ಮನೆ ಬರ್ಗಿಯಲ್ಲಿ ಇದ್ದರು ಎಂದರೆ ಸಾರಿಯಲ್ಲ. ಸಾಕ್ಷಿಯು ಮುಂದುವರಿದು ಎದುರುದಾರರ ಮನೆಯಲ್ಲ ಇದ್ದರು ಎಂದು ನುಡಿಯುತ್ತಾರೆ. ನನ್ನ ಮಗಳು ಯಾವುದೇ ಕೆಲಸಕ್ಕೆ ಹೋಗುತ್ತಿರಲಿಲ್ಲ. ಎದುರುದಾರರು ಸದ್ರಿ ಸಂದರ್ಭದಲ್ಲಿ ಯಾವ ಕೆಲಸವನ್ನು ಮಾಡುತ್ತಿದ್ದರು ಎಂಬ ಬಗ್ಗೆ ನನಗೆ ಈಗ ನೆನಪಿಗೆ ಬರುತ್ತಿಲ್ಲ.

ನನ್ನ ಮಗಳ ಮದುವೆ 2009 ರಲ್ಲಿ ಆಗಿರುತ್ತದೆ. ಎದುರುದಾರರು ಮದುವೆ ಆಗಿ ಅಂದಾಜು 4 ವರ್ಷಗಳ ನಂತರ ವಿದೇಶಕ್ಕೆ ಕೆಲಸಕ್ಕಾಗಿ ಹೋಗಿರುತ್ತಾರೆ. ಸದ್ರಿ ಸಂದರ್ಭದಲ್ಲಿ ಎದುರುದಾರರು ನನ್ನ ಮಗಳಿಗ ಹಾಗೂ ಅರ್ಜಿದಾರರಿಗೆ ಬಟ್ಟೆ ಹಾಗೂ ಹಣವನ್ನು ನೀಡುತ್ತಿದ್ದರು ಎಂದರೆ ಸರಿಯಲ್ಲ. ಎದುರುದಾರರಿಗೆ ವಿದೇಶದಿಂದ ಬಂದ ಸಂದರ್ಭದಲ್ಲಿ ನನ್ನ ಮಗಳಿಗೆ ಹಾಗೂ ನನಗೆ ಮೊಬೈಲ್ ಹಣ ಹಾಗೂ ಬಟ್ಟೆಬರೆಗಳನು ನೀಡುತ್ತಿದ್ದರು ಸಹ ಇಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ

ಸರಿಯಲ್ಲ. ಎದುರುದಾರರು ನನ್ನ ಮಗಳ ಸಂಪೂರ್ಣ ಖರ್ಚು ಹಾಗೂ ನಮ್ಮ ಮನೆಯ ಸಂಪೂರ್ಣ ಖರ್ಚನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ.

ನನ್ನ ಮಗಳು ಆತ್ಮಹತ್ಯೆ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಮಗಳು ಎದುರುದಾರರ ಮನೆಯಲ್ಲಿ ಮರಣ ಹೊಂದಿರುತ್ತಾರೆ. ಈ ಕುರಿತಾಗಿ ನಾವು ಫಿರ್ಯಾದನ್ನು ನೀಡಿರುತ್ತೇವೆ. ನನ್ನ ಮಗಳು ತೀವ್ರ ಅನಾರೋಗ್ಯದಿಂದ ಮೃತಪಟ್ಟಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಮಗಳು ಯಾವ ಅನಾರೋಗ್ಯದಿಂದ ಮೃತಪಟ್ಟಿರುತ್ತಾಳೆ ಎಂದು ನನಗೆ ನೆನಪಿಲ್ಲ.

ಪ್ರಸ್ತುತ ಎದುರುದಾರರು ಭಾರತದಲ್ಲಿ ಇರುವ ಬಗ್ಗೆ ನನಗೆ ಗೊತ್ತಿಲ್ಲ. ಎದುರುದಾರರಿಗೆ ವಿದೇಶದಲ್ಲಿ ಮಾಲನಲ್ಲಿ ಕೆಲಸದಲ್ಲಿ ಇದ್ದರು. ಪ್ರಸ್ತುತ ಎದುರುದಾರರು ವಿದೇಶದಲ್ಲಿ ಕೆಲಸದಲ್ಲಿ ಇರದೇ ಭಾರತದಲ್ಲಿ ನೆಲೆಸಿರುವ ಬಗ್ಗೆ ನನಗೆ ತಿಳಿದಿಲ್ಲ. ಎದುರುದಾರರು ಅರ್ಜಿದಾರರ ಎಲ್ಲಾ ಖರ್ಚು ವೆಚ್ಚಗಳನ್ನು ಇಂದಿನ ದಿನಾಂಕದವರೆಗೆ ನೋಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಎದುರುದಾರರು ಅವರ ಪತ್ನಿ ಶಾಹಿಸ್ತಾ ಸಮರಿನ್ ರವರಿಗೆ ಮಾಡಿಕೊಟ್ಟಂತಹ ಒಡವೆಗಳನ್ನು ಮಕ್ಕಳಿಗೆ ಬೇಕು ಎಂದು ನನ್ನ ಬಳಿ ಇಟ್ಟುಕೊಂಡಿದ್ದೇನೆ ಎಂದರೆ ಸರಿಯಲ್ಲ. ಎದುರುದಾರರು ಅರ್ಜಿದಾರರನ್ನು ತಾನು ನೋಡಿಕೊಳ್ಳುತ್ತೇನೆ ಎಂದು ಕರೆದುಕೊಂಡು ಹೋಗಿರುತ್ತೇನೆ ಎಂದು ಹೇಳಿದ್ದಾರೆ ಎಂದರೆ ಸರಿಯಲ್ಲ.

ಎದುರುದಾರರು ತಮ್ಮ ಮಕ್ಕಳ ವಿದ್ಯಾಭ್ಯಾಸ ವನ್ನು ಹಾಗೂ ಅವರನ್ನು ಕರೆದುಕೊಯಿ ಹೋಗಲು ತಯಾರ ಇದ್ದರೂ ಸಹ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮಕ್ಕಳ ಜೊತೆಗೆ ಎದುರುದಾರರನ್ನು ದೂರವಾಣಿ ಮುಖಾಂತರ ಮಾತನಾಡಲು ಅವಕಾಶ ಕಲ್ಪಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ನಾನು ದಾಖಲಿಸಿದ ಅರ್ಜಿಯನ್ನು ವಜಾ ಮಾಡಬೇಕೆಂದು ಕೇಳಿಕೊಳ್ಳುತ್ತಾರೆ.

**ಕ್ರಿಮಿನಲ್ ಮಿಸ್**. ನಂ.:24/2025

ಪಿ.ಡಬ್ಲ್ಯೂ: 01

**ಮರು ವಿಚಾರಣೆ - ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಹೆ.ಪ್ರ.ದ.ನ್ಯಾ.ದಂ. ಕುಮಟಾ